Deputation

ಕರ್ನಾಟಕ ಸರ್ಕಾರ

ಸಂ.ಡಿಪಿಎ 14 ಎಸ್‌ಆರ್‌ಬಿ 90

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 6-3-1991.

## ಸುತ್ತೋಲೆ

ವಿಷಯ: ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನೌಕರರುಗಳ ನೇಮಕಾತಿ ಮತ್ತು ನೇಮಕ ಸಮಾಲೋಚನೆಯ ಪ್ರಕ್ರಿಯೆ ಮತ್ತು ಸೂಚನೆಗಳ ಬಗ್ಗೆ

ಉಲ್ಲೇಖ: 1) ಸುತ್ತೋಲೆ ಸಂಖ್ಯೆ ಡಿಪಿಎ 16 ಎಸ್‌ಆರ್‌ಬಿ 81 ದಿನಾಂಕ: 18-11-81.

2) ಸುತ್ತೋಲೆ ಸಂಖ್ಯೆ ಡಿಪಿಎ 10 ಎಸ್‌ಆರ್‌ಬಿ 89 ದಿನಾಂಕ: 20-11-89.

---

ಮೇಲೆ ಉಲ್ಲೇಖಿಸಿರುವ ದಿನಾಂಕ: 18-11-1981ರ ಡಿಪಿಎ 16 ಎಸ್‌ಆರ್‌ಬಿ 81 ಮತ್ತು ದಿನಾಂಕ: 20-11-1989ರ ಡಿಪಿಎ 10 ಎಸ್‌ಆರ್‌ಬಿ 89 ಸಂಖ್ಯೆಯ ಸುತ್ತೋಲೆಗಳಲ್ಲಿ ಸರ್ಕಾರಿ ನೌಕರರ ಸೇವೆಯನ್ನು ಪ್ರತಿನಿಯೋಜನೆಯ ಮೇಲೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವಹಿಸಿಕೊಡುವಾಗ ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಸೂಚನೆಗಳನ್ನು ಹೊರಡಿಸಲಾಗಿದೆ.

ಮೇಲೆ ಉಲ್ಲೇಖಿಸಿರುವ 20-11-89ನೇ ದಿನಾಂಕದ ಸುತ್ತೋಲೆಯನ್ನು ಮಾರ್ಪಾಡು ಮಾಡಿ ಈ ಮುಂದಿನ ಸೂಚನೆಗಳನ್ನು ಹೊರಡಿಸಲಾಗಿದೆ.

1) 1981ರ ನವೆಂಬರ 18ನೇ ದಿನಾಂಕದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಎರವಲು ಪಡೆಯುವ ಮತ್ತು ನೀಡುವ ಇಲಾಖೆಗಳ ಮಧ್ಯೆ ಪರಸ್ಪರ ಸಮಾಲೋಚನೆಯ ಪದ್ಧತಿ ಮುಂದುವರೆಯಬೇಕು.

2) ವರ್ಗಾವಣೆಯ ಕಾಲವು ಪ್ರಾರಂಭವಾಗುವುದಕ್ಕೆ ಮುಂಚೆ ವರ್ಷದಲ್ಲೊಮ್ಮೆ, ಎರವಲು ಪಡೆಯುವ ಇಲಾಖೆಯು ಎರವಲು ಕೊಡುವ ಇಲಾಖೆಗೆ, ತನ್ನ ಇಲಾಖೆಗೆ ಅಗತ್ಯವಿರುವ ಅಧಿಕಾರಿಗಳ ನಿರ್ದಿಷ್ಟ ಪ್ರವರ್ಗಗಳನ್ನು ತಿಳಿಸಿ ಮತ್ತು ಅವರನ್ನು ನೇಮಕ ಮಾಡಬೇಕಾದ ಹುದ್ದೆಗಳನ್ನು ತಿಳಿಸಿ ತನ್ನ ಅಗತ್ಯಗಳನ್ನು ತಿಳಿಸಬೇಕು.

3) ಎರವಲು ನೀಡುವ ಇಲಾಖೆಗೆ ಈ ಮಾಹಿತಿ ದೊರೆತ ತರುವಾಯ ಎರವಲು ನೀಡುವ ಇಲಾಖೆಯು ಎರವಲು ಪಡೆಯುವ ಇಲಾಖೆಯೊಂದಿಗೆ ಸಮಾಲೋಚಿಸಿದ ತರುವಾಯ ನೇಮಕ ಮಾಡಬೇಕು. ಅಂತಹ ಹುದ್ದೆಗಳಿಗೆ ನೇಮಕ ಮಾಡುವುದಕ್ಕಾಗಿ ಅಧಿಕಾರಿಗಳ ಸೇವೆಯನ್ನು ಎರವಲು ಪಡೆಯುವ ಇಲಾಖೆಯ ವಶಕ್ಕೆ ಒಪ್ಪಿಸಲಾಗಿದೆ ಎಂಬುದನ್ನು ಹೊರಡಿಸಬೇಕಾದ ಆದೇಶಗಳಲ್ಲಿ ತಿಳಿಸಬೇಕು.

.....2

(4) ಎರವಲು ಪಡೆದಿರುವ ಮತ್ತು ಎರವಲು ನೀಡಿರುವ ಇಲಾಖೆಗಳ ನಡುವಣ ಸಮಾಲೋಚನೆಗಳು ಸಂಬಂಧಪಟ್ಟ ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ನಡೆಯತಕ್ಕದ್ದು.

ಸಂಬಂಧಪಟ್ಟವರೆಲ್ಲರೂ ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕೆ. ಹಿರಿಯಣ್ಣ

(ಕೆ. ಹಿರಿಯಣ್ಣ)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾನಿಯಮಗಳು)

ಇವರಿಗೆ—

ಸರ್ಕಾರದ ಕಾರ್ಯದರ್ಶಿಗಳು
ಇಲಾಖೆಗಳ ಮುಖ್ಯಸ್ಥರು.